ವೈನಾಗೈತೇನೋ ಬಂದು ನೋಡೇ' ಹೆಂಡತಿಯನ್ನು ಕರೆದ ಬಸಯ್ಯ. ಗಂಗವ್ವನ ಹಿಂದಾಗಡೆ ಹರೇದ ಮಗಳು ಉಮೆಯೂ ಬಂದಾಗ ಬಸಯ್ಯಗೆ ಪಾಡೆನಿಸಲಿಲ್ಲ. ಗಂಗವ್ವ ರುಬ್ಬೋಗುಂಡು ಹಾಕಿ ತಿರುವಿ ಪರೀಕ್ಷಿಸಿಯೂ ನೋಡಿ, 'ಚೆಂದಾಗೈತೇಳ್ರಿ' ಅಂದಳು. ಊರಗಲವಾಗಿದ್ದ ನಿಂಗ, ಮಾದರ ಮೋರೆ ಆಟೇ ಅಲ್ಲ ಉಮೆಯ ಮೋರೆಯೂ ಅರಳಿತ್ತು. 'ಯೋಯ್! ನಡಿರ್ರೆ ಒಳ್ಗೆ' ಗಕ್ಕನೆ ಗದರಿದ ಬಸಯ್ಯ. ಅವರು ಸುಮ್ಮಗೆ ಒಳಹೊಂಟರು. 'ಕೂಲಿ ಏಟಾತ್ರೋ ಇದ್ಕೆ?' ಬಸಯ್ಯ ಇವರತ್ತ ತಿರುಗಿದ. 'ನಿಮಗೆ ತಿಳಿದೋಟು ಕೊಡ್ರಾ' ವಿನೀತನಾದ ನಿಂಗ. ಗೂಟಕ್ಕೆ ನೇತು ಹಾಕಿದ್ದ ಕಿಸೆ ಅಂಗಿ ತಂದು ಜೇಬೆಲ್ಲಾ ತಡಕಾಡಿ ತೆಗೆದ ಕಾಸುಗಳನ್ನು ದೂರದಿಂದಲೇ ಅವರ ಕೈಗೆ ಎತ್ತಿ ಹಾಕಿದ. ಕೂಲಿ ಕಡಿಮೆಯಾತೆನ್ನಿಸಿದರೂ ಮರು ಮಾತಾಡುವ ದಮ್ಮು ಹುಟ್ಟಿನಿಂದಲೇ ಅಡಗಿ ಬಿಟ್ಟಿದ್ದರಿಂದ ಕೊಟ್ಟದನ್ನೇ ಮಹಾಪ್ರಸಾದವೆಂಬಂತೆ ಪಂಚೆ ಗಂಟಿಗೆ ಸಿಕ್ಕಿಸಿಕೊಂಡನಾದರೂ ಹೋಗದೆ ತಲೆಕೆರೆದು ನಿಂತ ನಿಂಗ ಪರಿಯಿಂದ ಬಸಯ್ಯನಿಗಾಟೇ ಅಲ್ಲ ಮಾದನಿಗೂ ರೇಗಿತು. 'ಇನ್ನೇನಲೆ ನಿಂದು?' ಸಿಡಿಮಿಡಿಗೊಂಡ ಬಸಯ್ಯ. 'ಅದೇರಿ ಪರಮಾತ್ಮ ನೆತ್ತಿಗೆ ಬಂದ. ಏನಾರ ಪರಸಾದ ಕೊಟ್ರೆ ತಿಂದ್ಕೊಂಡು ಹೊಕ್ಕೇವಿ' ಗೊಣಗಿದ ನಿಂಗ. 'ನಿಮ್ಮ ಯೋಗ್ತಿನೇ ಅಷ್ಟು' ಉದ್ಧಾರವಾಗಲ್ಲಲೇ ನೀವು. ಕಾಸು ಮೇಲೆ ಕಜ್ಜಾಯಾನೂ ಬೇಕು... ಇರ್ರಲೆ' ಬೈದುಕೊಳ್ಳುತ್ತಲೇ ಒಳಹೋದ ಬಸಯ್ಯ. ಅವನ ಕೂಗಾಟ ಕೇಳಿಸಿಕೊಂಡಿದ್ದ ತಾಯಿ ಮಗಳಾಗಲೇ ಬಿಸಿಬಿಸಿ ರೊಟ್ಟಿ ಪಲ್ಯ ಕೊಡಲು ಅಣಿಯಾಗಿದ್ದರು. 'ಯೋಯ್ ಮಳ್ಳುಗುಳ, ತಂಗಳು ಪಂಗಳದ್ದು ಇದ್ದರೆ ಕೊಡ್ರೇ' ಹೆಂಡತಿ ಮೇಲೆ ಹರಿಹಾಯ್ದುರು ಈಚೆ ಬಂದ ಬಸಯ್ಯ, 'ಇನ್ನು ಇಲ್ಲೇ ನಿಂತಿರಲ್ಲೋ ಮರದ ಕೆಳಾಗೆ ಹೋಗಿ ಕುಂದಿರ್ರಿ' ಎಂದಿವರ ಮೇಲೂ ಎಗರಾಡಿದ. ಕುಕ್ಕರಗಾಲಲ್ಲಿ ಕೂತ ತಂದೆ ಮಗನ ಅಂಗೈಗಳ ಮೇಲ ಕ್ಷಣ ಮಾತ್ರದಲ್ಲೇ ಎರಡೆರಡು ಒಣಕಲು ರೊಟ್ಟಿ ಅದರ ಮ್ಯಾಗೆ ಹಸಿ ಮೆಣಸಿನಕಾಯಿ, ಸಿಪ್ಪೆಸುಲಿದ ಈರುಳ್ಳಿಗಳು ಬಂದು ಕುಂತವು. ಹಿರಿಹಿರಿಹಿಗ್ಗಿದೋನು ನಿಂಗ. 'ಮನೆಗೋಗಿದ್ರೆ ಬಿಸಿಬಿಸಿ ಮುದ್ದೇನಾರ ಸಿಗೋದು 'ಎಂದು ಮುಲುಕಾಡಿದ್ದ ಮಾದ. ಬಿಸಿಲ ಜಳ ಬೇರೆ. ಬೇಗನೆ ತಿಂದು ಮುಗಿಸಿದರು. 'ನೀರು' ಎಂದು ಕೂಗದೆ 'ಕವ್ ಕವ್' ಎಂದು ಕೆಮ್ಮುತ್ತಾ ಬಾಗಿಲತ್ತ ನೋಡಿದರು. ಚೆರಿಗೆ ಹಿಡಿದು ಬಂದೋಳು ಉಮೆ, ಬಟ್ಟಲುಗಳನ್ನೂ ತಂದಿಟ್ಟಳು. 'ಯೋಯ್, ಬೊಗಸೆಗೆ ನೀರು ಸುರುವೆ ಕುಡಿತಾವೆ. ನೀನ್ಯಾಕೆ ಬಂದೆ ಕೂಸೆ? ಆಳುಮಗಾ ಎಲ್ಲಿ?' ಪಿರಿಪಿರಿ ಮಾಡಿದ ಕುಂತಲ್ಲೇ ಬಸಯ್ಯ.

ಮೊದಲು ಬೊಗಸೆಯೊಡ್ಡಿದ ಮಾದನಿಗೆ ನೀರು ಹಣಿಸುತ್ತಾ, 'ಒಳಕಲ್ಲು ಚೆಂದೈತೆ ಮಾದ. ನೀ ಏನ್ ಮಾಡಿದ್ರೂ ಚೊಲೋ ಇರ್ತೈತಪ್ಪಾ' ಪಿಸುಗಿದಳು ಉಮೆ. ಅವನು ಕಮಕ್ ಕಿಮಕ್ ಅನ್ನಲಿಲ್ಲ. 'ನೀನು ಆವತ್ತು ಮಾಡಿ ಕೊಟ್ಟಿದ್ದ ಕರಿಕಲ್ಲಿನ ಶಿವಲಿಂಗವಾ ದೇವರ ಕೋಣೆಯಾಗಿಟ್ಟೀನೋ... ದಿನಾ ಪೂಜಿ ಅದ್ಕೆ' ಕಿಸಕ್ಕನೆ ನಕ್ಕಳು. ಇವನೂ ನಿಶ್ಯಬ್ದವಾಗಿ ತುಟಿ ಅರಳಿಸಿದ. 'ಸಾಕು ಬಾರ್ಲೆ ಇತ್ತತ್ತಾ' ಮಗನನ್ನು ಅತ್ತ ಎಳೆದು ನಿಂಗ ಬೊಗಸೆಯೊಡ್ಡಿದ. ಅವರಿಬ್ಬರೂ ನೀರು ಕುಡಿದು ಅಂಗಳ ದಾಟುತ್ತಲೇ ಬಸಯ್ಯ ಮಗಳ ತನಿಖೆಗೆ ನಿಂತ. 'ಅವಂತಾವೇನೆ ಮಾತು ನಿಂದು?' 'ಅಯ್! ನೀರು ಕುಡಿದ್ನೋ ಸಿವ ನಿಮ್ಮನ್ನು ಚೆಂದಾಗಿಟ್ಟಿರ್ಲಿ ಅಂದ್ನೋ ನಾನೂ ಹಂಗೆ ಅಂದೆ... ತಪ್ಪಾ?' ಕೂಸು ಕೇಳಿತು. 'ಹೂಂ ಸರಿ ತಪ್ಪು ತಿಳೀದ ವಯಸ್ಸು ಮಗಳೆ ನಿಂದು' ಬಸಯ್ಯ ಮೋರೆ ಕಿವುಚಿದ. 'ತಿಳೀತೇತೆ ಬಿಡಪ್ಪಯ್ಯ. ಬಡವರು ಅಂತ ತಾನೆ ಹೊರಾಗಡೆ ಕೂರ್ಸಿ ತಂಗಳಿಕ್ಕಿದ್ದು. ಇದು ಮಾತ್ರ ಸರಿನಾ?' 'ದಡ್ಡಿ. ಬಡವರು ಅಂತಲ್ಲವ್ವ. ಕೀಳು ಜಾತಿ ಜನ ಕಣೆ ಅವು?' 'ಮತ್ತೆ ಬಸವಣ್ಣೋರು ಎಲ್ಲರನ್ನೂ 'ಇಂವಾ ನಮ್ಮವಾ ಅನ್ನಿರಯ್ಯಾ'